# ಮಿನುಮಿನುಗುವ ಮ್ಯೂನಿಕ್

ಚಿತ್ರ– ಲೇಖನ:
ಎಸ್.ಪಿ. ವಿಜಯಲಕ್ಷ್ಮಿ



ಹಿಮಪಾತದ ಸೊಬಗು



ಮ್ಯೂನಿಕ್– ಜರ್ಮನಿಯ ಪ್ರತಿಷ್ಠೆ, ಜರ್ಮನಿಯ ಹೆಮ್ಮೆ!

ಅದೊಂದು ದಿನ ಸ್ಟುಟ್‌ಗರ್ಟ್ ಸ್ಟೇಷನ್ನಿನಲ್ಲಿ ಮ್ಯೂನಿಕ್‌ಗೆ ವಾಪಸ್ಸಾಗಲು ರೈಲಿಗೆ ಕಾಯುತ್ತಿದ್ದೆ. ಕ್ಷಣಕ್ಷಣಕ್ಕೂ ಅಲ್ಲಿ ಜಮಾವಣೆಯಾಗುತ್ತಿದ್ದ ರಾಶಿರಾಶಿ ಜನರನ್ನು ಕಂಡಾಗ ನಿಜಕ್ಕೂ ದಿಗಿಲಾಗಿತ್ತು. ಭಾನುವಾರ ಬೇರೆ. ಜರ್ಮನಿಯಲ್ಲಿ 'ಅಕ್ಟೋಬರ್ ಫೆಸ್ಟ್' ಹವಾ ಜೋರಾಗಿ ನಡೆಯುತ್ತಿದ್ದ ಸಮಯ. ಉಲ್ಮ್ ಎಂಬ ಊರಿಂದ ಈ 'ಫೆಸ್ಟ್'ಗೆಂದೇ ಸ್ಟುಟ್‌ಗರ್ಟ್‌ಗೆ ಬಂದ ಅಗಾಧ ಯುವಜನ ಮತ್ತೆ ಉಲ್ಮ್‌ಗೆ ವಾಪಸ್ಸಾಗಲು ಜಮಾಯಿಸಿದ್ದರು. ಹೋಗುವಾಗಲೂ ಹೀಗೇ...ಹತ್ತಿದವರೆಲ್ಲಾ ಯುವಜನರೇ. ಕೈಯ್ಯಲ್ಲಿ ಎರಡೆರಡು ಬಾಟಲಿಗಳು. ಹೊಟ್ಟೆಯೊಳಗೆ ಈಗಾಗಲೇ ಫೆಸ್ಟ್‌ನಲ್ಲಿ ಒಳಗಿಳಿಸಿಕೊಂಡ 'ಪರಮಾತ್ಮ'ನ ಹರಿದಾಟ, ಎಷ್ಟೋ ಮಂದಿ ತೂರಾಡುತ್ತ, ಜೋರಾಗಿ ಮಾತು, ಕೇಕೆ ಹಾಕುತ್ತ ಸುತ್ತಲನ್ನು ಮರೆತಿರುವಂತಹ ಅಯೋಮಯ ಪರಿಸ್ಥಿತಿಯಲ್ಲಿದ್ದವರೇ.

ರೈಲು ಬಂದಿತು. ಹೇಗೋ ನುಗ್ಗಿ ಸೀಟು ಹಿಡಿದಾಯಿತು. ಈ ದಿನದಂತಹ ರಷ್ ಯಾವತ್ತೂ ಅಲ್ಲಿಯ ರೈಲುಗಳಲ್ಲಿ ನಾ ಕಂಡಿರಲಿಲ್ಲ. ಈ ಜನಸಾಗರಕ್ಕೆ ರೈಲು ಚಿಕ್ಕದೆನಿಸಿತ್ತು. ಎಲ್ಲೆಂದರಲ್ಲಿ ಕೂತರು, ನಿಂತರು, ಅಲ್ಲೇ ಬಾಟಲಿ ಓಪನ್ ಮಾಡಿದರು, ಕೇಕೆ ಹಾಕಿದರು. ನನ್ನ ಪಕ್ಕವೇ ಆರಡಿ ದೈತ್ಯದೇಹಿ ಹುಡುಗನೊಬ್ಬ ನಶೆಯಲ್ಲೇ ಹೇಗೋ ಮೇಲಿನಕಂಬಿ ಹಿಡಿದು ತೂರಾಡಿ ನಿಂತಿದ್ದ. ರೈಲು ಒಮ್ಮೆ ವೇಗ ಹೆಚ್ಚಿಸಿಕೊಂಡಿತು. ಈ ಹುಡುಗ ಬ್ಯಾಲೆನ್ಸ್ ತಪ್ಪಿ ನನ್ನ ಮೇಲೇ ಬಿದ್ದ. ನನಗೆ ಶಾಕ್ ಆದರೆ, ಅವನಿಗೆ ಏಳಲೂ ತೋಚುತ್ತಿಲ್ಲ. ಕಡೆಗೆ ಎದ್ದು 'ಸಾರಿ, ಸಾರಿ..'ಎಂದ. ನಾಚಿಕೆಯಾಗಿತ್ತು ಪಾಪ